೨. ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಮಂಡ್ಯ ಜಿಲ್ಲೆ ವಿವಿಧ ತಾಲ್ಲೂಕುಗಳಲ್ಲಿ ಕ.ರಾ.ರ.ಸಾ.ಸಂಸ್ಥೆಯ ಡಿಪೋಗಳನ್ನು ಹಾಗೂ ವಿಭಾಗವನ್ನು ಪ್ರಾರಂಭಿಸುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 76(1602)

ಸದಸ್ಯರ ಹೆಸರು: ಶ್ರೀ ಚಲುವರಾಯಸ್ವಾಮಿ ಎನ್.ಎಸ್.(ಮಂಡ್ಯ)

ಪ್ರಶ್ನೆ

ಅ) ಮಂಡ್ಯ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಕ.ರಾ.ರ.ಸಾ. ಸಂಸ್ಥೆಯ ಡಿಪೋಗಳನ್ನು ಪ್ರಾರಂಭಿಸುವ ಉದ್ದೇಶವಿದೆಯೇ?

ಆ) ಹಾಗಿದ್ದಲ್ಲಿ ಅದರ ವಿವರಗಳೇನು?

ಇ) ಮಂಡ್ಯದಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗವನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ತೆರೆಯಬೇಕಾದ ಅವಶ್ಯಕತೆಯನ್ನು ಸಾರಿಗೆ ಸಂಸ್ಥೆ ಮನಗಂಡಿದೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಕುರಿತು ಈವರೆವಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಉತ್ತರಿಸುವ ಸಚಿವರು: ಶ್ರೀ ಸಿ.ಆರ್.ಸಗೀರ್ ಅಹಮದ್(ಸಾರಿಗೆ ಸಚಿವರು)

ಉತ್ತರ

ಅ) ಮಂಡ್ಯ ಜಿಲ್ಲೆಯ ಮದ್ದೂರು ಮತ್ತು ಮಳವಳ್ಳಿಯಲ್ಲಿ ಘಟಕಗಳನ್ನು ನಿರ್ಮಿಸುವ ಯೋಜನೆ ಇದೆ.

ಆ) ಮದ್ದೂರಿನಲ್ಲಿ ಕಾಮಗಾರಿಯ ಕೆಲಸವು ಪ್ರಗತಿಯಲ್ಲಿದೆ. ಕ.ರಾ.ರ.ಸಾ. ಸಂಸ್ಥೆಯು ಮಳವಳ್ಳಿಯಲ್ಲಿ 6 ಎಕರೆ ಸರ್ಕಾರಿ ಜಮೀನನ್ನು (ಘಟಕ ನಿರ್ಮಿಸುವ ಉದ್ದೇಶದಿಂದ) ಪಡೆದುಕೊಳ್ಳಲಾಗಿದೆ. ಈ ಜಮೀನು ಬಹಳ ತಗ್ಗು ಪ್ರದೇಶವಾಗಿದ್ದು ಇದನ್ನು ಸಮತಟ್ಟಾಗಿಸಲು ಸುಮಾರು ರೂ.24.00 ಲಕ್ಷ ಬೇಕಾಗಿರುತ್ತದೆ. ಆದುದರಿಂದ, ಮತ್ತೊಂದು ಜಮೀನನ್ನು ಅಂದರೆ 2.45 ಹೆಕ್ಟೇರ್ (6 ಎಕರೆ, 5 ಗುಂಟೆ) ಪಡೆದು ಕೊಳ್ಳಲು ಕ್ರಮ ಜಾರಿಯಲ್ಲಿದೆ.

ಇ) ಪ್ರಸ್ತುತ, ಸಂಸ್ಥೆಯ ಮುಂದೆ ಈ ಪ್ರಸ್ತಾವನೆ ಇರುವುದಿಲ್ಲ. ವಿಭಾಗ ಕಛೇರಿಯನ್ನು

ತೆರೆಯುವುದರಿಂದ ಆಡಳಿತಾತ್ಮಕ ಉಪಯೋಗವಾಗುತ್ತದೆಯೇ ವಿನಹ ಪ್ರಯಾಣಿಕರ ಸಾರಿಗೆಯ ಅವಶ್ಯಕತೆಯನ್ನು ಪೂರೈಸಲು ಉಪಯುಕ್ತವಾಗುವುದಿಲ್ಲ.

ಈ) ಮೇಲೆ ನೀಡಿರುವ ಉತ್ತರದಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಶ್ರೀ ಎಂ.ಎಸ್.ಆತ್ಮಾನಂದ: ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಘಟಕಗಳನ್ನು ನಿರ್ಮಿಸುವ ಯೋಜನೆ ಇದೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಇದು ಯಾವ ಹಂತದಲ್ಲಿದೆ ಎನ್ನತಕ್ಕಂಥದ್ದನ್ನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಹಾಗೆಯೇ ವಿಭಾಗೀಯ ಕಛೇರಿಯನ್ನು ಪ್ರಾರಂಭ ಮಾಡಬೇಕೆಂದು ನಾನು ಕೇಳಿದ್ದಕ್ಕೆ, ವಿಭಾಗೀಯ ಕಛೇರಿಯನ್ನು ತೆರೆಯುವುದರಿಂದ ಆಡಳಿತಾತ್ಮಕವಾಗಿ ಉಪಯೋಗವಾಗುತ್ತದೆಯೇ ವಿನಹ ಪ್ರಯಾಣಿಕರ ಸಾರಿಗೆಯ ಅವಶ್ಯಕತೆಯನ್ನು ಪೂರೈಸಲು ಆಗುವುದಿಲ್ಲವೆಂದು ಹೇಳಿದ್ದಾರೆ. ಆದರೆ, ಈಗಾಗಲೇ ವಿಭಾಗೀಯ ಕಛೇರಿಗಳನ್ನು ಪ್ರಾರಂಭ ಮಾಡಿರತಕ್ಕಂಥವು ವಿದ್ಯುಕ್ತವಾಗಿ ಕಾರ್ಯ ನಿರ್ವಹಿಸುತ್ತಿವೆಯೋ ಅಥವಾ ಕೇವಲ ಆಡಳಿತಾತ್ಮಕಕ್ಕೆ ಉಪಯೋಗವಾಗುತ್ತಿದೆಯೇ ಅಥವಾ ಸಾರಿಗೆ ವ್ಯವಸ್ಥೆಯನ್ನು ಅಂದರೆ, ಪ್ರಯಾಣಿಕರಿಗೆ ಅನುಕೂಲ ಕಲ್ಪಿಸುವುದಕ್ಕೆ ಪೂರಕವಾಗಿದೆಯೇ ಎಂಬುದನ್ನು ನಾನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಾರಿಗೆ ಸಚಿವರು ನಮ್ಮ ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟಂತೆ ಬಹಳ ಉದಾಸೀನ ಧೋರಣೆಯನ್ನು ತಾಳಿದ್ದಾರೆ. ಅನೇಕ ಕಡೆ ಡಿವಿಜನ್‌ಗಳು ಇದೆ. ಆದರೂ ಕೂಡ ಎರಡು-ಮೂರು ವರ್ಷಗಳಿಂದ ನಾವು ಪ್ರಯತ್ನ ಪಡುತ್ತಿದ್ದರೂ ಕೂಡ ಇದರ ಬಗ್ಗೆ ಅವರು ಏತಕ್ಕೆ ಮನಸ್ಸು ಮಾಡಿಲ್ಲ ಎಂಬುದನ್ನು ತಮ್ಮ ಮುಖಾಂತರ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಸಿ.ಆರ್.ಸಗೀರ್ ಅಹ್ಮದ್: ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯಲ್ಲಿ ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕುಗಳಲ್ಲಿ ಬಸ್ ಘಟಕಗಳನ್ನು ಪ್ರಾರಂಭ ಮಾಡುವ ಬಗ್ಗೆ ನಾವು ಈಗಾಗಲೇ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಈಗಾಗಲೇ ಮದ್ದೂರಿನಲ್ಲಿ ಕೆಲಸ ಪ್ರಗತಿಯಲ್ಲಿದೆ. ಆದರೆ, ಮಳವಳ್ಳಿಯಲ್ಲಿ ಜಾಗದ ಬದಲಾವಣೆಗೆ ನಿರೀಕ್ಷಿಸಲಾಗಿದೆ. ಆ ಜಾಗ ಸಿಕ್ಕಿದ ತಕ್ಷಣವೇ ಅದರ ಕಾರ್ಯವನ್ನು ಪ್ರಾರಂಭ ಮಾಡುತ್ತೇವೆ. ಮಾನ್ಯ ಶಾಸಕರು ಅನೇಕ ಸಂದರ್ಭಗಳಲ್ಲಿ ಪತ್ರ ಬರೆಯುವುದರ ಮುಖಾಂತರ ಒಂದು ವಿಭಾಗೀಯ ಕಛೇರಿಯನ್ನು ಪ್ರಾರಂಭ ಮಾಡುವುದರ ಬಗ್ಗೆ ಒಂದು ಪ್ರಸ್ತಾವನೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈಗಾಗಲೇ ಇಲಾಖಾಧಿಕಾರಿಗಳ ಜೊತೆ ಚರ್ಚೆ ನಡೆಸಿದ್ದೇವೆ. ಈ ಡಿವಿಜನಲ್ ಕಛೇರಿಗಳನ್ನು ಪ್ರಾರಂಭ ಮಾಡುವ ಬಗ್ಗೆ ನಾವು ಚಿಂತನೆ ನಡೆಸುತ್ತಿದ್ದೇವೆ. ಇದಕ್ಕೆ ಕೆಲವು ಮಾರ್ಗಗಳನ್ನು ನಾವು ಹಾಕಿಕೊಂಡಿದ್ದೇವೆ. ಇದು ಖಾಸಗಿ ವಲಯದಲ್ಲಿ ಬರುವುದರಿಂದ ಇಲ್ಲಿ ಒಂದು ವಿಭಾಗೀಯ ನಿಯಂತ್ರಣ ಅಧಿಕಾರಿಗಳ ಕಛೇರಿಯ ಅವಶ್ಯಕತೆ ಇದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಅಧ್ಯಯನ ಮಾಡುತ್ತೇವೆ. ಜೊತೆಗೆ ಮಂಡ್ಯ ನಗರದಲ್ಲಿ ಹೆಚ್ಚಾಗಿ ಖಾಸಗಿ ವಾಹನಗಳು

ಇರುವುದರಿಂದ ನಮಗೆ ಆತಂಕ ಉಂಟಾಗಿದೆ. ಆದ್ದರಿಂದ, ಮುಂದಿನ ವರ್ಷದಲ್ಲಿ ಪ್ರಾಯಶಃ ಒಂದು ವಿಭಾಗೀಯ ನಿಯಂತ್ರಣ ಅಧಿಕಾರಿಗಳ ಕಛೇರಿ ಪ್ರಾರಂಭ ಮಾಡುವುದರ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ ಎಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ.ಎಸ್.ಆತ್ಮಾನಂದ: ಮಾನ್ಯ ಅಧ್ಯಕ್ಷರೆ, ಖಾಸಗಿ ವಲಯದ ಮತ್ತು ಸರ್ಕಾರಿ ಬಸ್‌ಗಳು ಓಡಾಡತಕ್ಕಂಥ ಅನೇಕ ಜಿಲ್ಲೆಗಳಲ್ಲಿ ವಿಭಾಗೀಯ ಕಛೇರಿಗಳು ಇರತಕ್ಕಂಥದ್ದನ್ನು ನಾನು ಗಮನಿಸಿದ್ದೇನೆ. ಇದು ನಮ್ಮಲ್ಲಿ ಅವಶ್ಯಕವಾಗಿ ಆಗಲೇಬೇಕಾಗಿದೆ. ಹತ್ತಾರು ವರ್ಷಗಳಿಂದ ನಮ್ಮಲ್ಲಿ ಒಂದು ಡಿಪೋ ಮಾತ್ರ ಇತ್ತು. ಈಗ ಎರಡು ಡಿಪೋಗಳನ್ನು ಪ್ರಾರಂಭ ಮಾಡಲು ಪೂರ್ವಭಾವಿ ಸಿದ್ಧತೆ ಮಾಡಿದ್ದೇವೆ ಎಂದು ತಿಳಿಸಿದ್ದೀರಿ. ಸಾರ್ವಜನಿಕರ ಹಿತದೃಷ್ಟಿಯಿಂದ ಖಂಡಿತವಾಗಿಯೂ ಸಹ ನಮ್ಮ ಜಿಲ್ಲೆಯಲ್ಲಿ ವಿಭಾಗೀಯ ಕಛೇರಿ ಪ್ರಾರಂಭ ಮಾಡಬೇಕೆಂದು ನಾನು ಆಗ್ರಹ ಪೂರ್ವಕವಾಗಿ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಸೋಮಶೇಖರ್: ಈಗಾಗಲೇ ಮಾನ್ಯ ಮಂತ್ರಿಗಳು ಮಂಡ್ಯ ಜಿಲ್ಲೆಯ ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕುಗಳಲ್ಲಿ ಘಟಕವನ್ನು ಸ್ಥಾಪನೆ ಮಾಡುವ ಉದ್ದೇಶ ಇದೆ ಎಂದು ಹೇಳಿದ್ದಾರೆ. ಮಳವಳ್ಳಿಯಲ್ಲಿ ಜಾಗದ ಸಮಸ್ಯೆ ಇದೆ. ಪರ್ಯಾಯ ಜಾಗವನ್ನು ಈಗಾಗಲೇ ಗುರ್ತಿಸಲಾಗಿದೆ. ಹಾಗೆಯೇ, ಸದರಿ ಜಾಗಕ್ಕೆ ರಿಜಿಸ್ಟ್ರೇಷನ್ ಕೂಡ ಆಗಿದೆ. ಈ ವರ್ಷ ಸದರಿ ಘಟಕದ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳುತ್ತೇವೆಂದು ಮಾನ್ಯ ಸಚಿವರು ಈ ಸಂದರ್ಭದಲ್ಲಿ ಆಶ್ವಾಸನೆಯನ್ನು ಕೊಟ್ಟರೆ, ನಾನು ಮಾನ್ಯ ಸಚಿವರಿಗೆ ಅಭಿನಂದಿಸುತ್ತೇನೆ.

ಶ್ರೀ ಸಿ.ಆರ್.ಸಗೀರ್ ಅಹ್ಮದ್: ಮಾನ್ಯ ಅಧ್ಯಕ್ಷರೆ, ಮಾನ್ಯ ಗೌರವಾನ್ವಿತ ಶಾಸಕರು ಹೇಳಿದ ಹಾಗೆ ಈಗಾಗಲೇ ಮಳವಳ್ಳಿಯಲ್ಲಿ ಒಂದು ಘಟಕವನ್ನು ಪ್ರಾರಂಭ ಮಾಡತಕ್ಕಂಥ ಪ್ರಸ್ತಾವನೆ ನಮ್ಮ ಮುಂದೆ ಇದೆ. ಮಾನ್ಯ ಶಾಸಕರು ಹೇಳಿದ ಹಾಗೆ ಹಿಂದೆ ನೀಡಿದಂಥ ಜಾಗ ಉತ್ತಮವಾಗಿರಲಿಲ್ಲ ಎಂಬ ಕಾರಣಕ್ಕಾಗಿ ಇದು ಮುಂದೆ ಹೋಗಿದೆಯಷ್ಟೆ. ಜಾಗ ನೀಡುವುದರ ಬಗ್ಗೆ ಮಾನ್ಯ ಸದಸ್ಯರು ಈಗಾಗಲೇ ಮಾಹಿತಿಯನ್ನು ಕೊಟ್ಟಿದ್ದಾರೆ. ಆ ಜಾಗ ಪಡೆದ ತಕ್ಷಣವೇ ನಾವು ಘಟಕ ನಿರ್ಮಾಣ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಹಾಗೆಯೇ ಮಾನ್ಯ ಆತ್ಮಾನಂದರವರು ಹೇಳಿದ ಹಾಗೆ, ಮಾಡಬಾರದು ಎನ್ನತಕ್ಕಂಥ ಉದ್ದೇಶ ನನ್ನದಲ್ಲ ಅಥವಾ ನಮ್ಮ ಇಲಾಖೆಗೆ ಇಲ್ಲ, ಆದ್ಯತೆ ಮೇರೆಗೆ ಈ ಕೆಲಸವನ್ನು ಮುಂದಿನ ವರ್ಷ ಅಂದರೆ, 2002-2003ನೇ ಸಾಲಿನಲ್ಲಿ ತೆಗೆದುಕೊಳ್ಳುತ್ತೇವೆಂದು ನಾನು ಅವರಿಗೆ ಆಶ್ವಾಸನೆ ಕೊಡುವುದಕ್ಕೆ ಇಷ್ಟಪಡುತ್ತೇನೆ.